ಹಾಲು ರಾಮೇಶ್ವರದ ಪುಣ್ಯ ಕ್ಷೇತ್ರದ ಅಭಿವೃದ್ಧಿ

(215) 320

ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ)

ಹಾಲು ರಾಮೇಶ್ವರದ ಪುಣ್ಯ ಕ್ಷೇತ್ರದ ಅಭಿವೃದ್ಧಿ

ಅ)ಹೊಸದುರ್ಗ ತಾಲ್ಲೂಕು ಶ್ರೀ ಹಾಲು ರಾಮೇಶರ್ವ ಪುಣ್ಯಕ್ಷೇತ್ರವು ಪ್ರವಾಸೋದ್ಯಮ ಇಲಾಖೆಗೆ ಸೇರಿದೆಯೇ?

ಆ)ಇದರ ಅಭಿವೃದ್ಧಿಗಾಗಿ ಸರ್ಕಾರ ಕೈಗೊಂಡ ಕ್ರಮಗಳೇನು ಹಾಗೂ, ಬಿಡುಗಡೆಯಾದ ಅನುದಾನವೆಷ್ಟು?

ಆನಂದ್ ಸಿಂಗ್

ಪ್ರವಾಸೋದ್ಯಮ ಸಚಿವರು

ಅ)ಹೊಸದುರ್ಗ ತಾಲ್ಲೂಕು ಶ್ರೀ ಹಾಲು ರಾಮೇಶರ್ವವನ್ನು ಪ್ರವಾ–ಸೋದ್ಯಮ ಇಲಾಖೆಯು ಪ್ರವಾಸಿ ತಾಣವೆಂದು ಗುರುತಿಸಿದೆ.

ಆ)ಈ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ರೂ.655.49 ಲಕ್ಷಗಳ ಯೋಜನಾ ವರದಿ ತಯಾರಿಸಿ ಧನಸಹಾಯ ಕೋರಿ ಕೇಂದ್ರ ಪ್ರವಾಸೋದ್ಯಮ ಮಂತ್ರಾಲಯಕ್ಕೆ ಪ್ರಸ್ತಾವನೆ ಕೇಂದ್ರ ಸರ್ಕಾರದಲ್ಲಿ ಬಾಕಿ ಇರುತ್ತದೆ.

ಬಿ.ಡಿ.ಎ ಸ್ವತ್ತನ್ನು ಸಂರಕ್ಷಿಸುವುದು

(213) 228

ಶ್ರೀ ಕೆ.ಜೆ.ಜಾರ್ಜ್

ಅ) ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ದೊಡ್ಡ ಬಾಣಸವಾಡಿ ಗ್ರಾಮದ ಸರ್ವೆ ನಂ.11/1ಎ ನಲ್ಲಿರುವ 03–00 ಎಕರೆ ಜಮೀನು ಬಿಡಿಎ ಸ್ವತ್ತಾಗಿದ್ದು, ಇದನ್ನು ಸಂರಕ್ಷಿಸಲು ಕೈಗೊಂಡಿರುವ ಕ್ರಮವೇನು?

ಆ) ಜಮೀನಿನ ಎಕ್ಸಿಕ್ಯೂಷನ್ ಕೇಸ್ ನಂ. 1624/2011ರ ತೀರ್ಪಿನನ್ವಯ ಏನು ಕ್ರಮ ಕೈಗೊಳ್ಳಲಾಗಿದೆ?

ಇ) ಸದರಿ ಜಮೀನಿಗೆ ಸಂಬಂಧಿಸಿದಂತೆ ನೀಡಲಾದ ತೀರ್ಪಿನನ್ವಯ ಬಿಡಿಎ ನ್ಯಾಯವಾದಿಯವರನ್ನು ಬದಲಾಯಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ.

ಶ್ರೀ ಜಗದೀಶ್ ಶೆಟ್ಟರ್
ಮುಖ್ಯಮಂತ್ರಿಗಳು

ಅ) ಬೆಂಗಳೂರು ಪೂರ್ವ ತಾಲ್ಲೂಕು, ಕೆ.ಆರ್.ಪುರಂ ಹೋಬಳಿ, ಬಾಣಸವಾಡಿ ಗ್ರಾಮದ ಸರ್ವೆ ನಂ.11/1 ಮತ್ತು 11/2ರ ಜಮೀನುಗಳ ಬಗ್ಗೆ "Both Sy Nos. Notification quashed by the Hon'ble High Court pending decision of land tribunal regarding Khatedar"ಎಂದು ಆದೇಶ ಆಗಿರುತ್ತದೆ.

ಆ) ಎಕ್ಸಿಕ್ಯೂಷನ್ ಕೇಸ್ ನಂ. 1624/2011ರಲ್ಲಿ ಶ್ರೀ ಕೃಷ್ಣಾರೆಡ್ಡಿಯವರು, ಶ್ರೀ ಪ್ರಭಾಕರ್ ಎಂಬುವವರ ಮೇಲೆ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಪ್ರಾಧಿಕಾರವನ್ನು ಪ್ರತಿವಾದಿಯನ್ನಾಗಿ ಮಾಡಬೇಕೆಂದು ಅರ್ಜಿ ಸಲ್ಲಿಸಿದ್ದು, ಸದರಿ ಅರ್ಜಿಯು ದಿನಾಂಕ 04.07.2012ರಲ್ಲಿ ರೂ. 5000/- ಖರ್ಚಿನ ಸಮೇತ ವಜಾಗೊಂಡಿರುತ್ತದೆ. ಇದನ್ನು ಪ್ರಶ್ನಿಸಿ ಪ್ರಾಧಿಕಾರವು ರಿಟ್ ಪಿಟಿಷನ್ ಸಂಖ್ಯೆ: 512/2012ನ್ನು ದಾಖಲಿಸಿದ್ದು, ಸದರಿ ಅರ್ಜಿಯು ಸಹಾ ವಜಾಗೊಂಡಿರುತ್ತದೆ.

ಇ) ಪ್ರಕರಣ ವಜಾಗೊಂಡಿರುವುದರಿಂದ ವಿಷಯಕ್ಕೆ ಸಂಬಂಧಿಸಿದಂತೆ, ನ್ಯಾಯವಾದಿಯಾದ ಶ್ರೀ ವಿ.ಬಿ.ಶಿವಕುಮಾರ್‌ರವರನ್ನು ಬದಲಾಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಪ್ರವಾಸೋದ್ಯಮ ಅಭಿವೃದ್ಧಿ
(234) 317

ಶ್ರೀ ಲಾಲಾಜಿ ಆರ್.ಮೆಂಡನ್ [ಕಾಪು]

ಅ) ಉಡುಪಿ ಜಿಲ್ಲೆಯ ಕಾಪು ವಿಧಾನಸಭಾ ಕ್ಷೇತ್ರದ ಕಾಪು ದೀಪಸ್ತಂಭ ಬಳಿ ಪ್ರವಾಸೋದ್ಯಮ ಇಲಾಖೆಗೆ ಹಣ ಮಂಜೂರಾತಿಯಾಗಿದ್ದರೂ